ಒಂದಾಣೆ ಮಾಲೆ 237

ಈಶಾವಾಸ್ಯೋಪನಿಷತ್

(ಕನ್ನಡ ಪದಾರ್ಥ, ತಾತ್ಪರ್ಯ ಮತ್ತು ವಿವರಣೆ ಸಹಿತ)

❋

ಪರಿವರ್ತಕ:
ಡಾ| ಕೋ. ಶ. ಕಾರಂತ, ಬಿ. ಎ., ಬಿ. ಎಲ್.,
ಎಡ್ವೊಕೇಟ್, ಮಂಗಳೂರು-3.

1959

❋

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಈಶಾವಾಸ್ಯೋಪನಿಷತ್

ಶಾಂತಿಪಾಠ

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥
ಓಂ ಶಾಂತಿಃ ಶಾಂತಿಃ ಶಾಂತಿಃ

ಪೂರ್ಣಮ್+ಅದಃ-ಅದು ಪೂರ್ಣ; ಪೂರ್ಣಮ್+ಇದಂ-ಇದು ಪೂರ್ಣ. ಪೂರ್ಣಾತ್-ಪೂರ್ಣದಿಂದ, ಪೂರ್ಣಮ್-ಪೂರ್ಣವು, ಉದಚ್ಯತೆ-ಹೊರಗೆ ವ್ಯಕ್ತವಾಗುತ್ತದೆ; ಉಳಿದಿದೆ. ಪೂರ್ಣಸ್ಯ-ಪೂರ್ಣದಿಂದ, ಪೂರ್ಣಮ್-ಪೂರ್ಣವನ್ನು, ಆದಾಯ-ತೆಗೆದರೂ, ಪೂರ್ಣಮ್+ಏವ-ಪೂರ್ಣವೇ, ಅವಶಿಷ್ಯತೆ-ಉಳಿದಿದೆ.

ಅದು ಪೂರ್ಣ; ಇದು ಪೂರ್ಣ. ಪೂರ್ಣದಿಂದ ಪೂರ್ಣವು ಉಳಿಯಿತು. ಪೂರ್ಣದಿಂದ ಪೂರ್ಣವನ್ನು ತೆಗೆದರೂ ಪೂರ್ಣವೇ ಉಳಿದಿದೆ.

ಓಂ ಶಾಂತಿಯು ದೊರೆಯಲಿ, ಶಾಂತಿಯು ದೊರೆಯಲಿ, ಶಾಂತಿಯು ದೊರೆಯಲಿ.

ಒಂದು ರಾತ್ರಿ ಒಬ್ಬ ದಾರಿಗನಿಗೆ ಒಂದು ದೀಪದ ಕಂಬದಲ್ಲಿ ಭೂತವು ಕಾಣಿಸಿಕೊಂಡಿತು. ಆ ದೀಪದ ಕಂಬವು ಪೂರ್ಣವಾಗಿತ್ತು. ಅದರಲ್ಲಿ ಕಂಡ ಭೂತವೂ ಪೂರ್ಣವಾಗಿತ್ತು. ಆಗ ಕಂಬದ ಯಾವ ಅಂಶವಾದರೂ ಚಿಹ್ನೆ ಅಥವಾ ಭಾವನೆಯಾದರೂ ಆ ದಾರಿಗನಿಗೆ ಇರಲೇ ಇಲ್ಲ. ಮತ್ತು ಅವನಿಗೆ ಆ ಕಂಬದಲ್ಲಿ ಕಾಣಲೂ ಇಲ್ಲ. ಆ ಮೇಲೆ ಚೆನ್ನಾಗಿ ವಿಚಾರಿಸಿ ಮನಗೊಂಡ ಮೇಲೆ ಭೂತವು ಪೂರ್ಣವಾಗಿ ನಿವಾರಣೆಯಾಯಿತು; ಆಗ ಅವನ ದೃಷ್ಟಿಯಲ್ಲಿ ಕಂಬವು ಪೂರ್ಣವಾಗಿ ಇದ್ದಂತೆ ಉಳಿಯಿತು. ಭೂತ ತೋರಿದಾಗ ಕಂಬವಿರಲಿಲ್ಲ. ಭೂತವು ಆ ಕಂಬವಿದ್ದಲ್ಲಿಯೇ, ಆ ಕಂಬದಲ್ಲಿಯೇ ದೃಶ್ಯ.

ಭೂತವು ಆ ಕಂಬದಲ್ಲಿಯೇ ಉಳಿದು ಆ ಮೇಲೆ ಅದೃಶ್ಯವಾಯಿತು. ಆ ಕಂಬವು ಪೂರ್ಣವಾಗಿತ್ತು; ಈ ಭೂತವೂ ಪೂರ್ಣವಾಗಿತ್ತು. "ಪೂರ್ಣ ಮದಃ ಪೂರ್ಣಮಿದಂ ಪೂರ್ಣ" ಕಂಬದಿಂದ ಪೂರ್ಣ ಭೂತವು ಕಾಣಿಸಿ ಕೊಂಡರೂ ಪೂರ್ಣಕಂಬವು ಉಳಿದಿದೆ. "ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ."

ಹಾಗೆಯೇ, ಆತ್ಮನಲ್ಲಿ ಮನಸ್ಸು ಮತ್ತು ಬುದ್ಧಿಯ ಉಪಾಧಿಗಳಿಂದ ಕೂಡಿದ ಜೀವನು ಅಜ್ಞಾನಪರವಶನಾಗಿ, ಸರ್ವವ್ಯಾಪಿ ಆತ್ಮನನ್ನು ಕಾಣು ವುದಿಲ್ಲ. ಆದರೆ ಅವನು ದ್ವೈತ ಮತ್ತು ವಿವಿಧತೆಯ ಪ್ರಪಂಚ ಭೂತ ರೂಪವನ್ನು ಕಾಣುತ್ತಾನೆ. ವಿವೇಕ ಮತ್ತು ವಿಚಾರದಿಂದ ಮನಸ್ಸು ಮತ್ತು ಬುದ್ಧಿಯನ್ನು ಆಕ್ರಮಿಸಿದಾಗ, ಈ ದ್ವೈತ ಮತ್ತು ವಿವಿಧತೆಯ ಪ್ರಪಂಚವು ವಿಲೀನವಾಗಿ, ಆತ್ಮನನ್ನು ಮಾತ್ರ ನೋಡುವನು. ಈ ಬ್ರಹ್ಮ ಸ್ವರೂಪ ಆತ್ಮನನ್ನು ಈ ಶಾಂತಿಮಂತ್ರದಲ್ಲಿ ಅದಃ ಎಂದಿದೆ.

ಈಶಾವಾಸ್ಯೋಪನಿಷತ್ತು ಯಜುರ್ವೇದದ ಅಂಸೇ ಅಧ್ಯಾಯವಾಗಿದೆ. ಇದರಲ್ಲಿ 18 ಮಂತ್ರಗಳಿವೆ. ಇದನ್ನು ಮಂತ್ರೋಪನಿಷತ್ತು, ಈಶೋಪ ನಿಷತ್ತು ಎಂದು ಕರೆಯುತ್ತಾರೆ.

ಹರಿ ಓಂ ।

ಈಶಾ ವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಮ್ ॥ ೧ ॥

ಜಗತ್ಯಾಂ–ಈ ಭೂಮಿಯಲ್ಲಿ, ಜಗತ್–ಚಲಿಸುವ, ಯತ್ಕಿಂಚ– ಯಾವುದಾದರೂ, ಇದಂ ಸರ್ವಂ–ಇದೆಲ್ಲವೂ, ಈಶ–ಈಶ್ವರನಿಂದ, ವಾಸ್ಯಂ– ವ್ಯಾಪಕವಾಗತಕ್ಕದ್ದು, ತುಂಬಿರತಕ್ಕದ್ದು. ತೇನ–(ತಸ್ಮಾತ್)–ಆದ್ದರಿಂದ, ತ್ಯಕ್ತೇನ (ತ್ಯಾಗೇನ) (ಅದನ್ನು) ತ್ಯಜಿಸುವುದರಿಂದ, ಭುಂಜೀಥಾ–ಸುಖ ಪಡು. ಕಸ್ಯ–ಯಾರ, ಸ್ವಿಧನಮ್–ಧನವನ್ನೂ, ಮಾಗೃಧಃ–ಆಶಿಸಬೇಡ.

ಈ ಭೂಮಿಯಲ್ಲಿ ಚಲಿಸುವ ಯಾವುದೆಲ್ಲಾ ಈಶ್ವರನಿಂದ ತುಂಬಿದೆ. ಆದ್ದರಿಂದ ಅದನ್ನು ತ್ಯಜಿಸಿ ಸುಖಪಡು. ಯಾರ ಧನವನ್ನೂ ಆಶಿಸಬೇಡ.

ಅಲ್ಲೊಂದು ಮರವಿದೆ. ಅದರ ಆಕಾರ, ಎಲೆ, ಕೊಂಬೆ, ಬಣ್ಣಾದಿಗಳು ನಮ್ಮ ಕಣ್ಣಿನ ಮೇಲೆ ತಂದೊಡ್ಡುವ ಸಂಸ್ಕಾರಗಳ ವಿವರಣೆಯೇ ಆ ಮರವು. ನಮಗೆ ಕಣ್ಣು ಇಲ್ಲದಿದ್ದರೆ ಆ ಮರದ ಅರಿವೇ ನಮಗೆ ಇರುವಂತಿಲ್ಲ. ಆ ಮರವನ್ನು ಕಡಿದ ಮೇಲೆ ಆ ಮರದಿಂದ ಯಾವ ಸಂಸ್ಕಾರವೂ ನಮ್ಮ ಕಣ್ಣಿನ ಮೂಲಕ ಮನಸ್ಸಿಗೆ ಬಾರದೇ ಇರುವುದರಿಂದ ಆ ಮರವು ಇಲ್ಲವೆಂದು ನಮಗನ್ನಿಸುತ್ತದೆ. ಮೊದಲು ಆ ಮರದ ರೂಪ ನಮ್ಮ ಮನಸ್ಸಿನಲ್ಲಿ ಬಿಂಬಿತವಾಗಿತ್ತು. ಈಗ ಅದಿಲ್ಲ.

ಈ ಪ್ರಕಾರವಾದ ಇಂದ್ರಿಯಗೋಚರಗಳ ಹಿನ್ನೆಲೆಯಾಗಿ ಪೂರ್ಣವೂ ಮಹತ್ತಾದ ಸರ್ವವ್ಯಾಪಕ ಆತ್ಮವು ಇದೆ. ಇದನ್ನೇ ಈ ಮಂತ್ರವು ನಿರೂಪಿಸಿದೆ. ಆ ಆತ್ಮನನ್ನು ತಿಳಿಸುವುದಕ್ಕಾಗಿ ಈ ಉಪನಿಷತ್ತು ಹೊರಟಿದೆ.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥ ೨ ॥

ಇಹ-ಈ ಲೋಕದಲ್ಲಿ, ಕರ್ಮಾಣಿ-ಕರ್ಮಗಳನ್ನು, ಅಗ್ನಿಹೋತ್ರಾದಿಗಳನ್ನು, ಕುರ್ವನ್ ಏವ-ಮಾಡುತ್ತಲೇ, ಶತಂ ಸಮಾಃ-ನೂರು ವರ್ಷ ಕಾಲ, ಜಿಜೀವಿಷೇತ್-ಜೀವಿಸುವುದಕ್ಕೆ ಇಚ್ಛಿಸು. ಏವಂ ತ್ವಯಿ-ನಿನಗೆ, ನರೇ-ಮಾನವನೆ, ಇತ-ಈ ಅಗ್ನಿಹೋತ್ರಾದಿ ಮಾರ್ಗವಲ್ಲದೆ, ನ ಅಸ್ತಿ-ಬೇರೆ ಮಾರ್ಗವೇ ಇಲ್ಲ. (ಇವನಿಗೆ) ಕರ್ಮ ನ ಲಿಪ್ಯತೆ-ಕರ್ಮಗಳು ಅಂಟಿಕೊಂಡು ಬಾಧಿಸುವುದಿಲ್ಲ ಎಂದರೆ ಅವುಗಳ ಪರಿಣಾಮರೂಪವಾದ ಪಾಪದೋಷಗಳು ಇರುವುದಿಲ್ಲ.

ಈ ಲೋಕದಲ್ಲಿ ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡುತ್ತಲೇ, ನೂರು ವರ್ಷಗಳ ಕಾಲ ಬದುಕಿರುವುದಕ್ಕೆ ಇಚ್ಛಿಸು. ನಿನಗೆ, ಮಾನವಗೆ, ಈ ಕರ್ಮಮಾರ್ಗವಲ್ಲದೆ ಬೇರೆ ಮಾರ್ಗವೇ ಇಲ್ಲ. ಇಂತಹನನ್ನು ಕರ್ಮಗಳು ಅಂಟಿಕೊಂಡು ಬಾಧಿಸುವುದಿಲ್ಲ.

ನಿವೃತ್ತಿಮಾರ್ಗವು ಮಾನವನಿಗೆ ಉದಾತ್ತಧ್ಯೇಯವಾಗಿರುವುದಾದರೂ, ಆ ಮಟ್ಟವನ್ನು ಏರಲಾರದ ಪ್ರಾಣಿಸ್ವಾಭಾವಿಕರಾದ ಮಾನವರಿಗೆ ಈ ಕರ್ಮಮಾರ್ಗವು ಬೋಧಿಸಲ್ಪಟ್ಟಿದೆ. ಇದನ್ನೇ 'ಕರ್ತವ್ಯಕ್ಕಾಗಿ

ಕರ್ತವ್ಯ' ಎಂದು ಹೇಳುತ್ತಿದ್ದಾರೆ. 'Dignity of labour' ಎಂಬ ಆಧುನಿಕರ ಶ್ರಮಜೀವನ ಅಥವಾ ಶ್ರಮದಾನದ ಗೌರವ ಎಂಬುದನ್ನು ಈ ಮಂತ್ರವು ಎಷ್ಟು ದಿವ್ಯವಾಗಿ ಉದ್ಘೋಷಿಸುತ್ತದೆ! ಕಡಿಮೆ ಕೆಲಸ ಹೆಚ್ಚಿನ ದುಡಿತ ಎಂಬುದು ನಮ್ಮ ವಿನಾಶದ ದಾರಿಯು. ಮಾನವನು ಸೋಮಾರಿಯಾಗಿರಲು ಹುಟ್ಟಿರುವುದಿಲ್ಲ.

ಅಸೂರ್ಯಾ ನಾಮತೇ ಲೋಕಾ ಅಂಧೇನ ತಮಸಾಽಽವೃತಾಃ ।

ತಾಂ ಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ ॥ ೩ ॥

ಅಸೂರ್ಯ-ಸೂರ್ಯನಿಲ್ಲ ಎಂಬ ಅಥವಾ ಅಸುರರ, ನಾಮ-ಹೆಸರುಳ್ಳ, ತೇ-ಆ, ಲೋಕಾ-ಲೋಕಗಳು, ಅಂಧೇನ-ಕುರುಡುಕಟ್ಟುವ, ತಮಸಾ-ಕತ್ತಲೆಯಿಂದ, ಆವೃತಾಃ-ಮುಚ್ಚಲ್ಪಟ್ಟಿದೆ. ಯೇಕೇ-ಯಾರು, ಆತ್ಮಹನೋ-ಆತ್ಮಘಾತಕ, ಜನಾಃ-ಜನರೋ, ತೇ-ಅವರು, ಪ್ರೇತ್ಯ-ಶರೀರಪಾತಾನಂತರ, ತಾಂ-ಆ ಲೋಕಗಳಿಗೆ, ಅಭಿಗಚ್ಛಂತಿ-ಹೋಗುತ್ತಾರೆ.

ಸೂರ್ಯನಿಲ್ಲ ಎಂಬ ಹೆಸರುಳ್ಳ ಆ ಲೋಕಗಳು ಕುರುಡುಗಟ್ಟುವ ಕತ್ತಲೆಯಿಂದ ಮುಚ್ಚಲ್ಪಟ್ಟಿದೆ. ಆತ್ಮಘಾತಕ ಜನರು ಮರಣಾನಂತರ ಆ ಲೋಕಗಳಿಗೆ ಹೋಗುತ್ತಾರೆ.

ಆತ್ಮಘಾತಕರು ಸೇರುವ ಅನಂದಾ ಅಥವ ಸೂರ್ಯನಿಲ್ಲದ ಲೋಕಗಳನ್ನು ಈ ಮಂತ್ರವು ವರ್ಣಿಸಿದೆ. ಪುನರ್ಜನ್ಮವನ್ನು ಈ ಮಂತ್ರವು ಪ್ರತಿಪಾದಿಸುತ್ತದೆ ಅಹಂಕಾರಿಸ್ವರೂಪಿ ಜೀವನು ಮರಣಪಟ್ಟ ಮೇಲೆ ಅವನು ಮಾಡಿದ ಕರ್ಮಜನ್ಯವಾಸನಾಬಲದಿಂದ ಪ್ರೇರಿತನಾಗಿ, ಅವುಗಳಿಗೆ ಅನುಗುಣವಾದ ಶರೀರವನ್ನು ಪಡೆದು ಜನ್ಮವೆತ್ತುವನು. ಆದರೆ, ಆತ್ಮನಾಶಕರು ಸೂರ್ಯನಿಲ್ಲದ ಕುರುಡುಕಟ್ಟುವ ಕತ್ತಲೆ ಕವಿದಿರುವ ಲೋಕಗಳಲ್ಲಿ ದೀರ್ಘಕಾಲ ನರಳಬೇಕಾಗುವುದೆಂದು ಈ ಮಂತ್ರವು ಎಚ್ಚರಿಸುತ್ತದೆ.

ಅನೇಜದೇಕಂ ಮನಸೋ ಜವೀಯೋ ನೈನದ್ದೇವಾ

ಆಪ್ನುವನ್ಪೂರ್ವಮರ್ಷತ್ ।

ತದ್ಧಾವತೋಽನ್ಯಾನತ್ಯೇತಿ ತಿಷ್ಠತ್ತಸ್ಮಿನ್ನಪೋ
ಮಾತರಿಶ್ವಾ ದಧಾತಿ ॥ ೪ ॥

ಏಕಂ-ಒಂದೇ ಒಂದಾದ ಆತ್ಮವು, ಅನೇಜದರ್-ಚಲಿಸದೆ ಇದೆ. (ಆದರೆ ಅದು) ಮನಸೋ–ಮನಸ್ಸಿಗಿಂತಲೂ, ಜವೀಯೋ–ವೇಗವುಳ್ಳದ್ದು. ಪೂರ್ವಂ ಅರ್ಷತ್-(ಅದು) ಮುಂದೆ ಓಡುತ್ತಿದ್ದರೂ, ದೇವಾ-ದೇವತೆಗಳು, ಏನತ್-ಅದನ್ನು, ನ ಅಪ್ನುವನ್-ಹೊಂದಲಾರರು, ಹಿಮ್ಮೆಟ್ಟಿಸಲಾರರು. ತಿಷ್ಠತ್-ಕುಳಿತೇ, ತದ್-ಅದು, ಧಾವತ್-ಓಡುತ್ತಾ, ಅನ್ಯಾನ್-ಹಿಂಬಾಲಿಸುತ್ತಿರುವವರನ್ನು, ಅತ್ಯೇತಿ-ಅತಿಕ್ರಮಿಸಿ ಸಾಗುತ್ತಿದೆ, ತಸ್ಮಿನ್-ಅದರಲ್ಲಿ, ಮಾತರಿಶ್ವಾ-ಮಾತರಿಶ್ವನು, ಅಪಾಃ-ಎಲ್ಲಾ ಜೀವಿಗಳ ಕರ್ಮಗಳನ್ನು, ಕರ್ಮಗಳನ್ನು ದಧಾತಿ-ಆಧರಿಸುತ್ತಾನೆ.

ಆತ್ಮವು ಚಲಿಸದೇ ಇರುತ್ತದೆ. ಆದರೆ ಅದು ಮನಸ್ಸಿಗಿಂತಲೂ ವೇಗವುಳ್ಳದ್ದು. ಅದು ಮುಂದೆ ಓಡುತ್ತಿದ್ದರೂ, ದೇವತೆಗಳು ಅದನ್ನು ಹಿಮ್ಮೆಟ್ಟಿಸಲಾರರು. ಅದು ಕುಳಿತೇ ಇದ್ದರೂ, ಅದು ಓಡುತ್ತಾ ತನ್ನನ್ನು ಹಿಂಬಾಲಿಸುವವರನ್ನು ಮೀರಿ ಮುಂದಕ್ಕೆ ಓಡುತ್ತದೆ. ಅದರಲ್ಲಿ ಮಾತರಿಶ್ವನು ಎಲ್ಲಾ ಜೀವಿಗಳ ಕರ್ಮಗಳನ್ನು ಆಧರಿಸುತ್ತಾನೆ.

೪ರಿಂದ ೮ರ ವರೆಗಿನ ಮಂತ್ರಗಳು ಆತ್ಮನ ಗುಣ-ವಿಭೂತಿಗಳನ್ನು ವರ್ಣಿಸುತ್ತವೆ. ಆತ್ಮನು ಅಚಲನು. ಆದರೆ ಆತ್ಮನನ್ನು ಇಂದ್ರಿಯಗಳೆಂಬ ದೇವತೆಗಳು ಹಿಡಿಯಲಾರವು, ಹಿಮ್ಮೆಟ್ಟಿಸಲಾರವು.

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥ ೫ ॥

ತತ್-ಆತ್ಮವು, ಏಜತಿ-ಚಲಿಸುತ್ತದೆ; ತತ್-ಅದು, ನ ಏಜತಿ-ಚಲಿಸುವುದಿಲ್ಲ. ತತ್-ದೂರೇ-ಅದು ದೂರದಲ್ಲಿದೆ. ತತ್ ಉ ಅಂತಿಕೇ-ಅದು ಬಹಳೇ ಸಮೀಪದಲ್ಲಿದೆ. ಅಸ್ಯ ಸರ್ವಸ್ಯ-ಎಲ್ಲವುಗಳ, ಅಂತರ-ಒಳಗೆ (ಇದೆ). ತತ್ ಉ-ಅದು ಕೂಡಾ, ಸರ್ವಸ್ಯ ಅಸ್ಯ-ಎಲ್ಲವುಗಳ, ಬಾಹ್ಯತಃ-ಹೊರಗೆ (ಇದೆ).

ಆತ್ಮವು ಚಲಿಸುತ್ತದೆ; ಅದು ಚಲಿಸುವುದಿಲ್ಲ. ಅದು ದೂರ ಮತ್ತು ಬಹಳ ಸಮೀಪವೇ ಇದೆ. ಅದು ಎಲ್ಲವುಗಳ ಒಳಗೆ ಇದೆ. ಅದು ಎಲ್ಲವುಗಳ ಹೊರಗೂ ಇದೆ.

ಉಗಿಬಂಡಿ-ರೈಲಿನಲ್ಲಿ ಸಂಚರಿಸುವಾಗ, ನಮಗೆ ಊರೆಲ್ಲಾ ಚಲಿಸುತ್ತಿರುವಂತೆ ಕಾಣುತ್ತದೆ. ಆದರೆ ನಿಜವಾಗಿ ನಾವು ಬಂಡಿಯಲ್ಲಿ ಕುಳಿತು ಚಲಿಸುತ್ತಿರುವುದಾದರೂ, ನಾವು ಚಲಿಸದೇ ಇದ್ದೇವೆ ಎಂದು ಅನ್ನಿಸುತ್ತದೆ. ಹಾಗೆಯೇ ನಮ್ಮ ಮನಸ್ಸು ಮತ್ತು ಬುದ್ಧಿ ಮೂಲಕ ಕೆಲಸಮಾಡುವ ಜೀವನಿಗೆ ಆತ್ಮನಲ್ಲಿ ಈ ಪ್ರಕಾರ ಚಲನಾದಿಗಳು ತೋರುವುದನ್ನು ಈ ಮಂತ್ರವು ವಿವರಿಸಿದೆ.

ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೆ ॥ ೬ ॥

ಯಃ-ಯಾರು, ಆತ್ಮನಿ ಏವ-ಆತ್ಮದಲ್ಲಿಯೇ, ಸರ್ವಾಣಿ ಭೂತಾನಿ-ಎಲ್ಲಾ ಪ್ರಾಣಿಗಳನ್ನು, ಅನುಪಶ್ಯತಿ-ನೋಡುತ್ತಾನೆಯೋ, ಚ-ಮತ್ತು, ಸರ್ವಭೂತೇಷು-ಎಲ್ಲಾ ಪ್ರಾಣಿಗಳಲ್ಲಿ ಆತ್ಮಾನಂ-ಆತ್ಮನನ್ನು, ಅನುಪಶ್ಯತಿ-ನೋಡುತ್ತಾನೆಯೋ, ತತಃ-ಅನಂತರ, (ಅವನು ಆ ಪ್ರಕಾರದ ದಿವ್ಯದರ್ಶನದಿಂದ) ನ ವಿಜುಗುಪ್ಸತೆ-ಯಾವುದರಿಂದಲೂ ಜುಗುಪ್ಸೆಯನ್ನು ಹೊಂದುವುದಿಲ್ಲ, ಅವನು ಯಾವುದನ್ನೂ ದ್ವೇಷಿಸುವುದಿಲ್ಲ.

ಯಾರು ಆತ್ಮದಲ್ಲಿಯೇ ಎಲ್ಲಾ ಪ್ರಾಣಿಗಳನ್ನು ನೋಡುತ್ತಾನೆಯೋ, ಮತ್ತು ಎಲ್ಲಾ ಪ್ರಾಣಿಗಳಲ್ಲಿ ಆತ್ಮನನ್ನು ನೋಡುತ್ತಾನೆಯೋ, ಅನಂತರ ಅವನು ಆ ಪ್ರಕಾರದ ದಿವ್ಯದರ್ಶನದಿಂದ ಯಾವುದನ್ನೂ ದ್ವೇಷಿಸುವುದಿಲ್ಲ. ಯಾವುದನ್ನು ಕಂಡರೂ ಜಿಗುಪ್ಸೆಯನ್ನು ಪಡುವುದಿಲ್ಲ.

ಅನುರಾಗ ಮತ್ತು ಜಿಗುಪ್ಸೆ ಇವು ಇಲ್ಲದಿರುವ ಸ್ಥಿತಿಯೇ ಸಮತ್ವಸ್ಥಿತಿ ಅಥವಾ ಸ್ಥಿತಪ್ರಜ್ಞಾವಸ್ಥೆ. ಅದನ್ನು ಈ ಮಂತ್ರವು ಪ್ರಶಂಸಿಸುತ್ತದೆ.

ಯಸ್ಮಿನ್ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ ॥ ೭ ॥

ಯಸ್ಮಿನ್ ವಿಜಾನತಃ-ಯಾವಾಗ ಜ್ಞಾನಿಗೆ, ಸರ್ವಾಣಿ ಭೂತಾನಿ-ಎಲ್ಲಾ ಪ್ರಾಣಿಗಳು, ಆತ್ಮಾ ಏವ ಅಭೂತ್-ಆತ್ಮವೇ ಆಗಿ ಬಿಡುತ್ತದೆಯೋ, ತತ್ರ-ಆಗ, ಕೋ ಮೋಹಃ-ವ್ಯಾಮೋಹವೆಲ್ಲಿ? ಕಃ ಶೋಕ-ಶೋಕವೆಲ್ಲಿ? ಏಕತ್ವಂ ಅನುಪಶ್ಯತಃ-ಅವನು ಏಕತ್ವವನ್ನು ನೋಡುತ್ತಾನೆ.

ಯಾವಾಗ ಜ್ಞಾನಿಗೆ ಎಲ್ಲಾ ಪ್ರಾಣಿಗಳು ತನ್ನ ಆತ್ಮವೇ ಆಗಿ ಬಿಡುತ್ತವೆಯೋ ಆಗ ಎಲ್ಲೆಲ್ಲಿಯೂ ಏಕತ್ವವನ್ನು ನೋಡುವ ಅವನಿಗೆ ಮೋಹವೆಲ್ಲಿ? ಶೋಕವೆಲ್ಲಿ? ಎಂದರೆ ಎಲ್ಲಿಯೂ ಮೋಹ ಮತ್ತು ಶೋಕ ಎಂಬುದೇ ಇಲ್ಲವೇ ಇಲ್ಲ.

ಮಡಿಕೆಗಾಳಿ, ಕುಡಿಕೆಗಾಳಿ, ಗಡಿಗೆಗಾಳಿ, ಇವು ಬೇರೆ ಬೇರೆಯಾಗಿ ಇರುವುದೆಂದು ಕಂಡರೂ ಗಾಳಿಯನ್ನು ಆವರಿಸಿರುವ ಮಡಿಕೆ, ಕುಡಿಕೆಗಡಿಗೆಗಳು ನಾಶವಾದರೆ, ಎಲ್ಲಾ ಗಾಳಿಗಳೂ ಹೊರಗಿನ ಗಾಳಿಯನ್ನು ಸೇರಿ ಒಂದೇ ಆಗಿಬಿಡುತ್ತವೆ. ಆಗ ಮಡಿಕೆಗಾಳಿ, ಕುಡಿಕೆಗಾಳಿ, ಗಡಿಗೆಗಾಳಿ-ಎಂಬ ಭೇದವೇ ಇಲ್ಲ. ಹಾಗೆಯೇ ಬಯಲಿನಲ್ಲಿರುವ ಕಟ್ಟವನ್ನು ಕಿತ್ತರೆ ಅಡಿಗೆ ಕೋಣೆ ಜಾಗ, ಚಾವಡಿ ಜಾಗ, ಪಡಸಾಲೆಜಾಗ ಎಂಬಿತ್ಯಾದಿ ಭೇದಗಳು ಉಳಿಯುವುದಿಲ್ಲ. ಹಾಗೆಯೇ ಈ ಶರೀರ, ಮನಸ್ಸು ಮತ್ತು ಬುದ್ಧಿ ಎಂಬ ಉಪಾದಿಗಳನ್ನು ಕಳಚಿ ಬಿಸಾಡಿದರೆ, ನಮ್ಮ ಕರ್ಮಜನ್ಯಸಂಸ್ಕಾರಗಳು ನಾಶವಾದರೆ, ಆಗ ಜೀವರೆಲ್ಲರೂ ಪ್ರಾಣಿಗಳೆಲ್ಲವೂ ಒಂದೇ ಒಂದಾದ ಆತ್ಮನಲ್ಲಿ ಸೇರಿ ಏಕತ್ವವನ್ನು ಹೊಂದುತ್ತದೆ. ಇದೇ ಏಕತ್ವಂ ಅನುಪಶ್ಯತಃ ಎಂಬುದರ ದೃಷ್ಟಾಂತಗಳು.

ಸ ಪರ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಂ
ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಃ ಸ್ವಯಂಭೂರ್ಯಾಥಾ
ತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ॥೮॥

ಸಃ-ಮೇಲಿನ ಮಂತ್ರದಲ್ಲಿ ನಿರೂಪಿತವಾದ ಆತ್ಮವು, ಪರ್ಯಗಾತ್-ಸರ್ವತ್ರ ಸಂಚರಿಸುವ, ವ್ಯಾಪಕ; ಶುಕ್ರಮ್-ಉಜ್ವಲ, ಅಕಾಯಮ್-

ಶರೀರ ಇಲ್ಲದ ಅವ್ರಣಮ್-ವ್ರಣರಹಿತ ಹುಟ್ಟು ಮೊದಲಾದವು ಇಲ್ಲದ, ಅಸ್ನಾವಿರಂ-ಸ್ನಾಯುರಹಿತ, ಶುದ್ಧಮ್-ಶುದ್ಧ, ಅಪಾಪವಿದ್ಧಮ್-ಪಾಪ ಸ್ಪರ್ಶಿತವಾದದ್ದು, ಕವಿ-ಕ್ರಾಂತಿಸ್ವರೂಪ, ಮನೀಷೀ-ಜ್ಞಾನಿ, ಪರಿಭೂ-ಸರ್ವತ್ರ ಇರುವ, ಸ್ವಯಂಭೂ-ಸ್ವಯಂಭು (ಆಗಿದೆ).

ಸಮಾಭ್ಯ-ಪ್ರಜಾಪತಿಗಳಿಗೆ, ಯಥಾತಥ್ಯತ-ಯಥಾಸ್ವಭಾವಾನುಸಾರ, ಅರ್ಥಾನ್-ಕರ್ತವ್ಯಗಳನ್ನು, ಶಾಶ್ವತೀಭ್ಯಃ-ಶಾಶ್ವತವಾಗಿ, ವ್ಯದಧಾತ್-ವ್ಯವಸ್ಥೆ ಮಾಡಿದೆ.

ಆ ಆತ್ಮವು ಸರ್ವತ್ರ ಸಂಚರಿಸುವಂತಾದ್ದು, ಮತ್ತು ಉಜ್ವಲ, ಅಶರೀರ, ವ್ರಣರಹಿತ, ಸ್ನಾಯುರಹಿತ, ಶುದ್ಧ ಪಾಪ ಅಸ್ಪರ್ಶಿತವು, ಕವಿ, ಜ್ಞಾನಿ, ಸರ್ವತವಿದ್ಯಮಾನ, ಸ್ವಯಂಭು ಆಗಿದೆ. ಪ್ರಜಾಪತಿಗಳಿಗೆ ಯಥಾಸ್ವಭಾವಾನುಸಾರ ಅದು ಕರ್ತವ್ಯಗಳನ್ನು ಶಾಶ್ವತವಾಗಿ ವ್ಯವಸ್ಥೆ ಮಾಡಿದೆ.

ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ॥೯॥

ಯೇ-ಯಾರು, ಅವಿಧ್ಯಾಉಮ್-ಅವಿದ್ಯೆಯನ್ನು, ಅಜ್ಞಾನವನ್ನು ಉಪಾಸತೆ-ಉಪಾಸನೆ ಮಾಡುವರೋ (ಅವರು), ಅಂಧಂ ತಮಃ-ಕುರುಡು ಕಟ್ಟುವ ಕತ್ತಲೆಯನ್ನು, ಪ್ರವಿಶಂತಿ-ಪ್ರವೇಶಿಸುತ್ತಾರೆ. (ಯಾರು) ವಿದ್ಯಾಯಾಂ ಉರತಾಃ-ವಿದ್ಯೆಯಲ್ಲಿ ಧ್ಯಾನಾದಿಗಳಲ್ಲಿ ಆಸಕ್ತ ಅಥವಾ ನಿರತರಾಗಿರುವರೋ, ತೆ-ಅವರು, ತತೋ ಭೂಯಃ ಇವ ತಮಃ-ಹೆಚ್ಚಾಗಿ ಅಂಧಕಾರವಾದ ಕತ್ತಲೆಯಂತಿರುವುದನ್ನು, ಪ್ರವಿಶಂತಿ-ಪ್ರವೇಶಿಸುವರು

ಯಾರು ಅವಿದ್ಯೆಯನ್ನು ಅನುಸರಿಸುವರೋ ಅವರು ಅಂಧಕಾರವಾದ ಕತ್ತಲೆಯನ್ನು ಪ್ರವೇಶಿಸುವರು. ಯಾರು ವಿದ್ಯೆಯಲ್ಲಿ ಎಂದರೆ ಧ್ಯಾನಾದಿಗಳಲ್ಲಿ ಆಸಕ್ತರಾಗಿರುವರೋ ಅವರು ಅದಕ್ಕೂ ಹೆಚ್ಚಾಗಿ ಅಂಧಕಾರವಾದ ಕತ್ತಲೆಯಂತಿರುವುದನ್ನು ಪ್ರವೇಶಿಸುವರು.

ಈ ಮಂತ್ರದಲ್ಲಿ ಬಾಹ್ಯಾಂಗವನ್ನು ಅವಿದ್ಯೆ ಎಂದೂ, ಆಂತರಿಕ ಧ್ಯಾನಾದಿಗಳನ್ನು ವಿದ್ಯೆ ಎಂದೂ ಕರೆದಿದೆ.

ಅನ್ಯದೇವಾಹುರ್ವಿದ್ಯಯಾಽನ್ಯದಾಹುರವಿದ್ಯಯಾ ।
ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ॥ ೧೦ ॥

ಅನ್ಯತ್ ಏವ-ಬೇರೆಯೇ ಆಗಿರುವ ಫಲವು, ವಿದ್ಯಯಾ-ವಿದ್ಯೆಯಿಂದ (ದೊರೆಯುತ್ತದೆಂದು) ಆಹುಃ-ಹೇಳುತ್ತಾರೆ. ಅವಿದ್ಯಯಾ-ಅವಿದ್ಯೆಯಿಂದ ಅನ್ಯತ್-ಬೇರೆಯಾದ ಫಲವು (ದೊರೆಯುತ್ತದೆಂದು), ಆಹುಃ-ಹೇಳುತ್ತಾರೆ. ಇತಿ-ಈ ಪ್ರಕಾರ ತತ್-ಅವಿದ್ಯೆ ಮತ್ತು ವಿದ್ಯೆಯನ್ನು (ನಮಗೆ) ವಿಚಚಕ್ಷಿರೇ-ವಿವರಿಸಿದ, ಧೀರಾಣಾಮ್-ಜ್ಞಾನಿಗಳಿಂದ, ಶುಶ್ರುಮ-ನಾವು ಕೇಳಿದ್ದೇವೆ.

ಬೇರೆಯೇ ಆದ ಫಲವು ವಿದ್ಯೆಯಿಂದ ದೊರೆಯುತ್ತದೆಂದು ಹೇಳುತ್ತಾರೆ. ಅವಿದ್ಯೆಯಿಂದ ಅನ್ಯವಾದ ಫಲವು ದೊರೆಯುವುದೆಂದು ಹೇಳುತ್ತಾರೆ. ಈ ಪ್ರಕಾರ ನಮಗೆ ಅವಿದ್ಯೆ ಮತ್ತು ವಿದ್ಯೆಯನ್ನು ಜ್ಞಾನಿಗಳಿಂದ ನಾವು ಕೇಳಿದ್ದೇವೆ.

ವಿದ್ಯೆ ಮತ್ತು ಅವಿದ್ಯೆ ಇವೆರಡೂ ಬಂಧನಗಳೇ ಆಗಿವೆ. ಅವಿದ್ಯೆಯ ಬಂಧನದಿಂದ ವಿಮೋಚನೆಯೇ ಜ್ಞಾನಪ್ರಾಪ್ತಿ. ಆದರೆ ಜ್ಞಾನವು ಆತ್ಮನ ಮೇಲೆ ಪರಿಮಿತಿಯಾಗಿರುವುದರಿಂದ ಅದೂ ಬಂಧನವು. ಅದ್ದರಿಂದ ವಿದ್ಯೆ ಮತ್ತು ಅವಿದ್ಯೆ ಇವೆರಡನ್ನೂ ಮೀರುವುದೇ ಪರಿಪೂರ್ಣಸ್ಥಿತಿ. ಅದರ ಪ್ರಾಪ್ತಿಯೇ ಮಂತ್ರದ ಬೋಧೆಯಾಗಿದೆ.

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥೧೧॥

ವಿದ್ಯಾಂ ಚ ಅವಿದ್ಯಾಂ-ವಿದ್ಯೆಯನ್ನು ಮತ್ತು ಅವಿದ್ಯೆಯನ್ನು, ಯಃ-ಯಾರು, ತತ್ ಉಭಯಂ ಸಹವೇದ-ಆ ಎರಡನ್ನೂ ಏಕಕಾಲದಲ್ಲಿ ತಿಳಿಯುತ್ತಾರೋ, ಅವನು, ಅವಿದ್ಯಯಾ-ಅವಿದ್ಯೆಯಿಂದ, ಮೃತ್ಯುಂ-ಮೃತ್ಯುವನ್ನು, ತೀರ್ತ್ವಾ-ಉತ್ತರಿಸಿ, ದಾಟಿ, ವಿದ್ಯಯಾ-ವಿದ್ಯೆಯಿಂದ, ಅಮೃತಂ-ಅಮರತ್ವವನ್ನು, ಅಶ್ನುತೆ-ಪಡೆಯುತ್ತಾನೆ.

ಯಾರು ವಿದ್ಯೆ ಮತ್ತು ಅವಿದ್ಯೆ ಇವೆರಡನ್ನು ಏಕಕಾಲದಲ್ಲಿ ತಿಳಿಯುತ್ತಾನೋ ಅವನು ಅವಿದ್ಯೆಯಿಂದ ಮೃತ್ಯುವನ್ನು ಉತ್ತರಿಸುತ್ತಾನೆ. ಮತ್ತು ವಿದ್ಯೆಯಿಂದ ಅಮೃತತ್ವವನ್ನು ಪಡೆಯುತ್ತಾನೆ.

ಅಂಧಂ ತಮಃ ಪ್ರವಿಶಂತಿ ಯೇಽ ಸಂಭೂತಿಮುಪಾಸತೆ ||
ತತೋಽಭೂಯ ಇವ ತೇ ತಮೋ ಯಉ ಸಂಭೂತ್ಯಾಂ ರತಾಃ||೧೨||

೧೨, ೧೩ ಮತ್ತು ೧೪ ನೆ ಮೂರು ಮಂತ್ರಗಳು ಅಕ್ಷರಶಃ ೯, ೧೦ ಮತ್ತು ೧೧ ನೆ ಮಂತ್ರಗಳೇ. ವಿದ್ಯಾ ಮತ್ತು ಅವಿದ್ಯಾ ಎಂಬ ಪದಗಳ ಬಗ್ಗೆ ಸಂಭೂತಿ ಅಸಂಭೂತಿ ಅಥವಾ ವಿನಾಶ ಎಂಬ ಪದಗಳು ಪ್ರಯೋಗಿಸಲ್ಪಟ್ಟಿವೆ. ಸಂಭೂತಿ ಎಂದರೆ ವ್ಯಕ್ತಸ್ವರೂಪ. ಅದೇ ವಿನಾಶವನ್ನು ಹೊಂದುವುದರಿಂದ ವಿನಾಶ ಎಂದಿದೆ. ಅಸಂಭೂತಿ ಎಂದರೆ ಅವ್ಯಕ್ತಸ್ವರೂಪ ಅಥವಾ ನಿರ್ಗುಣಸ್ವರೂಪ.

ಯಾರು ಅಸಂಭೂತಿಯನ್ನು ಉಪಾಸಿಸುವರೋ ಅವರು ಅಂಧಕಾರವಾದ ಕತ್ತಲೆಯನ್ನು ಪ್ರವೇಶಿಸುವರು. ಯಾರು ಸಂಭೂತಿಯಲ್ಲಿ ನಿರತರಾಗಿರುವರೋ ಅವರು ಅದಕ್ಕೆ ಅಧಿಕತರವಾದ ಕತ್ತಲೆಯನ್ನು ಸೇರುವರು.

ಅನ್ಯದೇವಾಹುಃ ಸಂಭವಾದನ್ಯದಾಹುರಸಂಭವಾತ್ |
ಇತಿ ಶುಶ್ರೂಮ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೆ || ೧೩ ||

ಬೇರೆಯೇ ಆದ ಫಲವು ಸಂಭೂತಿಯಿಂದ ದೊರೆಯುತ್ತದೆ ಎಂದು ಹೇಳುತ್ತಾರೆ. ಅಸಂಭೂತಿಯಿಂದ ಬೇರೆಯಾದ ಫಲವು ದೊರೆಯುತ್ತದೆಂದು ಹೇಳುತ್ತಾರೆ. ಈ ಪ್ರಕಾರ ನಮಗೆ ಸಂಭೂತಿ ಮತ್ತು ಅಸಂಭೂತಿಯನ್ನು ವಿವರಿಸಿದ ಜ್ಞಾನಿಗಳಿಂದ ನಾವು ಕೇಳಿದ್ದೇವೆ.

ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದೋಭಯಂ ಸಹ |
ವಿನಾಶೇನ ಮೃತ್ಯುಂ ತೀರ್ತ್ವಾ ಸಂಭೂತ್ಯಾಮೃತಮಶ್ನುತೆ || ೧೪ ||

ಯಾರು ಸಂಭೂತಿ ಎಂದರೆ ಆತ್ಮನನ್ನು ನಿರ್ಗುಣನೆಂದು ಮತ್ತು ವಿನಾಶ (ಆತ್ಮನನ್ನು ಸಗುಣ ದೇವರೆಂದು) ಇವೆರಡನ್ನು ಏಕಕಾಲದಲ್ಲಿ ತಿಳಿಯುತ್ತಾರೋ ಅವನು ವಿನಾಶದ ಎಂದರೆ ಸಗುಣ ಉಪಾಸನೆಯಿಂದ ಮೃತ್ಯುವನ್ನು ಉತ್ತರಿಸುತ್ತಾನೆ. ಮತ್ತು ನಿರ್ಗುಣ ಉಪಾಸನೆಯಿಂದ ಅಮೃತತ್ವವನ್ನು ಪಡೆಯುತ್ತಾನೆ.

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥೧೫॥

ಸತ್ಯಸ್ಯ-ಸತ್ಯದ, ಮುಖಮ್-ಮುಖವು, ಸ್ವರೂಪವು, ಹಿರಣ್ಮಯೇನ-ಚಿನ್ನದಂತಿರುವ, ಪಾತ್ರೇಣ-ಪಾತ್ರದಿಂದ, ಆವರಣದಿಂದ, ಅಪಿಹಿತಂ-ಮುಚ್ಚಲ್ಪಟ್ಟಿದೆ. ಪೂಷನ್-ಸೂರ್ಯನೇ, ತತ್-ಆ ಆವರಣವನ್ನು, ತ್ವಂ-ನೀನು (ನನಗಾಗಿ) ಸತ್ಯಧರ್ಮಾಯ-ಸತ್ಯ ಧರ್ಮದ, ದೃಷ್ಟಯೇ-ದರ್ಶನಕ್ಕಾಗಿ, ಅಪಾವೃಣು-ತೆಗೆ.

ಸತ್ಯದ ಸ್ವರೂಪವು ಚಿನ್ನದಂತಹ ಆವರಣದಿಂದ ಮುಚ್ಚಲ್ಪಟ್ಟಿದೆ. ಪೂಷನ್–ಸೂರ್ಯನೇ! ನನಗಾಗಿ ಆ ಸತ್ಯಧರ್ಮದ ದರ್ಶನಕ್ಕಾಗಿ ಆ ಆವರಣವನ್ನು ತೆಗೆ.

ಈ ಮಂತ್ರವು ಮರಣೋನ್ಮುಖನು ಸತ್ಯಧರ್ಮದ ದರ್ಶನಕ್ಕಾಗಿ ಸತ್ಯವನ್ನು ಮರೆಮಾಡಿರುವ ಚಿನ್ನದಂತೆ ನಮ್ಮನ್ನು ಮೋಹಿಸುವ ಮುಚ್ಚಳವನ್ನು ತೆಗೆಯಬೇಕೆಂದು ಮಾಡುವ ಪ್ರಾರ್ಥನೆಯಾಗಿದೆ. ವೇದಾಂತದಲ್ಲಿ ಪ್ರಾರ್ಥನೆ ಎಂಬುದು ಮಮಕಾರವನ್ನು ತ್ಯಜಿಸಿ ಜೀವನು ಆತ್ಮನೊಡನೆ ಬೆರೆತು ಒಂದಾಗಲು ಮಾಡುವ ಸಾಧನೆಯಾಗಿದೆ 'ಏಕಂ ಸದ್ವಿಪ್ರಾ ಬಹುದಾ ವದಂತಿ' ಎಂಬ ಉಕ್ತಿಯಂತೆ ಪೂಷನ್ ಆತ್ಮನ ಅಥವಾ ಪರಮಾತ್ಮನ ಅನಂತನಾಮಗಳಲ್ಲಿ ಒಂದಾಗಿದೆ. ನಾನು ಅಥವಾ ನಮ್ಮ ಮಮಕಾರವು ಮರಣಪಡದೆ ಆತ್ಮದರ್ಶನವಾಗದು.

ಪೂಷನ್ನೇಕರ್ಷೇ ಯಮ ಸೂರ್ಯಪ್ರಾಜಾಪತ್ಯ ವ್ಯೂಹ
ರಶ್ಮೀನ್ಸಮೂಹ ತೇಜೋ ।
ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ ಯೋಽ
ಸಾವಸೌ ಪುರುಷಃ ಸೋಽಹಮಸ್ಮಿ ॥ ೧೬ ॥

ಪೂಷನ್! ಜಗತ್ತನ್ನು ಪೂಷಿಸುವುದರಿಂದ ಪೋಷಕ ಸೂರ್ಯನೆ! ಏಕರ್ಷೇ-ಒಂಟಿಯಾಗಿ ಸಂಚರಿಸುವ, ಒಂಟಿಯಾಗಿ ದರ್ಶಿಸುವ, ಯಮಃ-ಸರ್ವರ ನಿಯಾಮಕನೇ! ಪ್ರಾಜಾಪತ್ಯ–ಪ್ರಜಾಪತಿಯ ಪುತ್ರನಾದ, ಸೂರ್ಯ. ಎಲ್ಲಾ ರಸ ಪ್ರಾಣಗಳನ್ನು ಸೆಳೆಯುವ ಸೂರ್ಯನೆ! ರಶ್ಮೀನ್–ನಿನ್ನ ರಶ್ಮಿಗಳನ್ನು ವ್ಯೂಹ ದೂರಕ್ಕೆ ತೆಗೆ ಅಥವಾ ಪಸರಿಸು, ತೇಜ–ನಿನ್ನ

ಉಜ್ವಲ ಪ್ರಕಾಶವನ್ನು, ಸಮೂಹ-ಏಕತ್ರಮಾಡು, ತೇ-ನಿನ್ನ, ರೂಪಂ-ರೂಪವು, ಕಲ್ಯಾಣತಮಮ್-ಅತ್ಯಂತ ಶೋಭಾಯಮಾನವಾಗಿರುವ, ತೆ-ನಿನ್ನ ತತ್-ಆ ರೂಪವನ್ನು ಪಶ್ಯಾಮಿ-ನಾನು ನೋಡುತ್ತೇನೆ, ಯೋ-ಯಾವುದು ಅಸೌಅಸೌ-ಆದಿತ್ಯ ಮಂಡಳದಲ್ಲಿರುವ ಎಂದರೆ ನಿನ್ನಂತೆ ಇರುವ, ಪುರುಷಃ-ಪುರುಷನೆ! ಸೋಽಹಮಸ್ಮಿ-ಅವನು ನಾನಾಗಿರುವೆನು.

ಹೆ ಪೂಷನ್! ಸರ್ವಪೋಷಕ ಸೂರ್ಯನೆ! ಏಕರ್ಷೇ! ಸರ್ವರ ನಿಯಾಮಕನೇ! ಪ್ರಜಾಪತಿಯ ಪುತ್ರ ಸೂರ್ಯನೇ! ನಿನ್ನ ರಶ್ಮಿಗಳನ್ನು ಪಸರಿಸು, ನಿನ್ನ ಉಜ್ವಲ ಪ್ರಕಾಶವನ್ನು ಏಕತ್ರಮಾಡು, ನಿನ್ನ ರೂಪವು ಕಲ್ಯಾಣತಮವಾಗಿದೆ. ಅದನ್ನೇ ನಾನು ನೋಡುತ್ತೇನೆ. ನಿನ್ನ ಅಂಶಸ್ಥ ಇರುವ ಪುರುಷನೇ ನಾನಾಗಿರುವೆನು.

ಧ್ಯಾನಾವಸ್ಥೆಯಲ್ಲಿ, ಮನಸ್ಸು, ಬುದ್ಧಿ ಇವು ಅತಿಕ್ರಮಿಸಿದಾಗ ದೊರೆಯುವ ಸತ್ಯದರ್ಶನದ ಅನುಭವವನ್ನು ಈ ಪ್ರಾರ್ಥನೆಯ ಮೊದಲಿನ ಭಾಗದಲ್ಲಿ ನಿರೂಪಿಸಿದೆ. "ರೂಪಂಕಲ್ಯಾಣತಮಂ ತತ್ತೇ ಪಶ್ಯಾಮಿ" ಕಲ್ಯಾಣ ರೂಪವನ್ನು ನೋಡುತ್ತಿದ್ದೇನೆ ಎಂಬೀ ಅನುಭವದಲ್ಲಿ ಜೀವನ ಮಮಕಾರವು ಪೂರ್ಣ ನಶಿಸಿರುವುದಿಲ್ಲ. ಈ ಸ್ಥಿತಿಯನ್ನು ಸವಿಕಲ್ಪಸಮಾಧಿ ಎಂದು ಹೇಳುತ್ತಾರೆ.

ಆ ಮೇಲೆ ಮಮಕಾರವು ಸಂಪೂರ್ಣವಾಗಿ ನಶಿಸಿ ಆದಿತ್ಯಮಂಡಲಸ್ಥ ಪುರುಷನೇ ನಾನಾಗಿರುವೆ ಎಂದು ಮಂತ್ರಾಂತ್ಯದಲ್ಲಿ ಹೇಳಿರುವುದು ನಿರ್ವಿಕಲ್ಪಸಮಾಧಿಯ ಅನುಭವವು.

ವಾಯುರನಿಲಮಮೃತಮಥೇದಂ ಭಸ್ಮಾಂತಂ ಶರೀರಮ್ ।
ಓಂ ಕ್ರತೋ ಸ್ಮರ ಕೃತಂ ಸ್ಮರ ಕ್ರತೋಸ್ಮರ ಕೃತಂ ಸ್ಮರ॥ ೧೭ ॥

ಅಥ-ಈಗ (ನಾನು ಪಂಚತ್ವವನ್ನು ಹೊಂದುವುದರಿಂದ), ವಾಯು-ನನ್ನ ಪ್ರಾಣವು ಅಮೃತಂ ಅನಿಲಂ-ಸೂತ್ರಾತ್ಮಕ ವಾಯುವನ್ನು ಸೇರಲಿ. ಈಗ ಇದಂ-ಈ ಶರೀರಂ-ಶರೀರವು, ಭಸ್ಮಾಂತಂ-ಭಸ್ಮಶೇಷವಾಗಲಿ.

ಓಂ ಕತ್ರೋ-ನನ್ನ ಮನಸ್ಸೆ! ಸ್ಮರ-ಸ್ಮರಿಸು. ಕೃತಂಸ್ಮರ-ನನ್ನ ಸ್ಮರಣೀಯ ಕರ್ಮವನ್ನು ಸ್ಮರಿಸು. ಕ್ರತೋಸ್ಮರ-ಮನಸ್ಸೇ ಸ್ಮರಿಸು. ಕೃತಂ ಸ್ಮರಂ-ನನ್ನ ಸ್ಮರಣೀಯ ಕರ್ಮವನ್ನು ಸ್ಮರಿಸು.

ಈಗ ನಾನು ಪಂಚತ್ವವನ್ನು ಹೊಂದುವುದರಿಂದ ನನ್ನ ಪ್ರಾಣವು ಸೂತ್ರಾತ್ಮಕ ವಾಯುವನ್ನು ಸೇರಲಿ. ಈಗ ಈ ಶರೀರವು ಭಸ್ಮಶೇಷವಾಗಲಿ. ಓಂ ನನ್ನ ಮನಸ್ಸೇ ಸ್ಮರಿಸು. ನನ್ನ ಸ್ಮರಣೀಯ ಕರ್ಮವನ್ನು ಸ್ಮರಿಸು. ಮನಸ್ಸೇ ಸ್ಮರಿಸು. ನನ್ನ ಸ್ಮರಣೀಯ ಕರ್ಮವನ್ನು ಸ್ಮರಿಸು.

ಅಗ್ನೇ ನಯ ಸುಪಥಾರಾಯೇ ಅಸ್ಮಾನ್ ವಿಶ್ವಾನಿ ದೇವ
ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನೋ ಭೂಯಿಷ್ಠಾಂ
ತೇ ನಮಉಕ್ತಿಂ ವಿಧೇಮ ॥ ೧೮ ॥

ಅಗ್ನೇ-ಅಗ್ನಿಯೇ, ದೇವ-ದಿವ್ಯದೇವನೇ, ವಿಶ್ವಾನಿ-ನಮ್ಮ ಎಲ್ಲಾ, ವಯುನಾನಿ-ಕರ್ಮಗಳನ್ನು, ವಿದ್ವಾನ್-ನೀನು ತಿಳಿದವನಾದ್ದರಿಂದ, ಅಸ್ಮಾನ್-ನಮ್ಮನ್ನು, ರಾಯೇ-ಐಶ್ವರ್ಯವನ್ನು ಪ್ರಾಪ್ತಿಮಾಡುವ, ಸುಪಥಾ-ಸುಂದರ ಮಾರ್ಗದಿಂದ, ನಯ-ಕರೆದೊಯ್ಯು. ಅಸ್ಮತ್-ನಮ್ಮಲ್ಲಿರುವ, ಜುಹುರಾಣಂ-ಕುಟಿಲ ವಂಚನಾತ್ಮಕವಾದ, ಏನಃ-ಪಾಪವನ್ನೆಲ್ಲಾ, ಯುಯೋಧಿ-ನಿವಾರಿಸು, ತೇ-ನಿನ್ನನ್ನು, ಭೂಯಿಷ್ಠಾಂ-ಬಹುತರವಾಗಿ, ನಮಉಕ್ತಿಂ-ನಮಸ್ಕಾರ ವಚನಗಳಿಂದ, ವಿಧೇಮ-ವಂದಿಸುತ್ತೇವೆ.

ಅಗ್ನಿಯೇ! ದಿವ್ಯದೇವನೇ! ನೀನು ನಮ್ಮ ಎಲ್ಲಾ ಕರ್ಮಗಳನ್ನು ತಿಳಿದವನಾದ್ದರಿಂದ ನಮ್ಮನ್ನು ಐಶ್ವರ್ಯಪ್ರಾಪ್ತಿಯ ಸುಂದರಮಾರ್ಗದಿಂದ ಕರೆದೊಯ್ಯು. ನಮ್ಮಲ್ಲಿರುವ ಕುಟಿಲಾದಿ ಪಾಪವನ್ನೆಲ್ಲಾ ನಿವಾರಿಸು. ನಿನ್ನನ್ನು ಬಹುವಾಗಿ ನಮಸ್ಕಾರ ವಚನಗಳಿಂದ ನಾವು ವಂದಿಸುತ್ತೇವೆ.

ಪ್ರತಿಯೊಬ್ಬ ಸಾಧಕನೂ ಧ್ಯಾನಾದಿಕಾರ್ಯಗಳು ಸುಗಮವಾಗಿ ಫಲಪ್ರದವಾಗುವುದಕ್ಕಾಗಿ ದೇವರಲ್ಲಿ ಅನನ್ಯ ಅವಿಭಾಜ್ಯ ಭಕ್ತಿಯನ್ನಿಟ್ಟಿರಬೇಕೆಂಬುದೇ ಈ ಕೊನೆಯ ಮಂತ್ರದ ವೇದಾಂತ ಸಂದೇಶವು.

ಓಂ ತತ್ಸತ್.

Edited, Printed & Published by K. V. Shenoy
at The Prabhat Printers Ltd., Mangalore.